**OS-18/2018**
**PW-1**

**<u>ದಿನಾಂಕಃ 28.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಎಮ್ ಡಿ **ವಕೀಲರಿಂದಃ**</u>

ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ಪ್ರಕಾಶ್ ಬಿನ್ ನಂಜುಂಡಯ್ಯರವರಿಗೆ ನಿವೇಶನ ಸಂಖ್ಯೆ 3 ಬರುತ್ತದೆ ಎಂದರೆ ಸರಿ. ದಿನಾಂಕ 12.07.1984 ರಂದು 2 ನೇ ವಾದಿ ಮತ್ತು 2 ನೇ ವಾದಿಯ ಸಹೋದರ ಮಲ್ಲೇಶ್ ರವರು ಪ್ರತಿವಾದಿಗೆ ಸರ್ವೆ ನಂಬರ್ 83/2 ಬಿ ನಲ್ಲಿ 30 ಗುಂಟೆ ಜಮೀನನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಪಶ್ಚಿಮದ ರಸ್ತೆಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ದಾವಾ ಅನುಸೂಚಿ ಸ್ವತ್ತನ್ನು ಒಳಗೊಂಡಂತೆ 80 ಅಡಿ ಉದ್ದ ಮತ್ತು 20 ಅಡಿ ಅಗಲದ ರಸ್ತೆಯನ್ನು ಬಿಟ್ಟಿದ್ದರು ಎಂದರೆ ಸರಿಯಲ್ಲ. ಸದರಿ 80 ಅಡಿ ಉದ್ದ ಮತ್ತು 20 ಅಡಿ ಅಗಲದ ರಸ್ತೆಯನ್ನು ಬಿಟ್ಟಿದ್ದರೂ ಸಹ ಸದರಿ ಜಾಗದಲ್ಲಿ ನನ್ನ ತಂದೆ ತಾಯಿ ಮತ್ತು ಪ್ರಕಾಶ ಬಿನ್ ನಂಜುಂಡಯ್ಯರವರು 2000 ನೇ ಇಸವಿಯಲ್ಲಿ ಮನೆ ಕಟ್ಟಲು ಪ್ರಯತ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ ಪ್ರತಿವಾದಿಯು ನನ್ನ ತಂದೆ ತಾಯಿ ಮತ್ತು ಪ್ರಕಾಶ್ ರವರ ವಿರುದ್ಧ ಅಸಲು ದಾವಾ ಸಂಖ್ಯೆ159/2000 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯು ಸದರಿ 80 ಅಡಿ ಉದ್ದ ಮತ್ತು 20 ಅಡಿ ಅಗಲದ ರಸ್ತೆಯಲ್ಲಿ ತನಗೆ ಓಡಾಡಲು ಹಕ್ಕು ಇದೆ (ರೈಟ್ ಆಫ್ ಈಸ್ಮೆಂಟ್ ಬೈ ನೆಸೆಸಿಟಿ) ಎಂದು ಕಚ್ಚಾ ನಕಾಶೆಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಸದರಿ 80 ಅಡಿ ಉದ್ದ ಮತ್ತು 20 ಅಡಿ ಅಗಲದ ರಸ್ತೆಯಲ್ಲಿ ದಾವೆ ಮುಗಿಯುವವರೆಗೂ ಯಾವುದೇ ಕಟ್ಟಡವನ್ನು ಕಟ್ಟಬಾರದು ಎಂದು ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧ ಕಾಜ್ಞೆ ಆದೇಶ ಹೊರಡಿಸಿತ್ತು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 30.12.2002 ರ ನೊಂದಾಯಿತ ಕ್ರಯ ಪತ್ರವು ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧ ಪಟ್ಟಿದ್ದು ಎಂದರೆ ಸರಿ. ಸದರಿ ದಿನಾಂಕ 30.12.2002 ರಂದು ದಾವಾ ಅನುಸೂಚಿ ಸ್ವತ್ತಿನ ಖಾತೆಯು ನನ್ನ ತಾಯಿಯಾದ 1 ನೇ ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮಕ್ಕೆ ಇರುವ ನಿವೇಶನ ಸಂಖ್ಯೆ 3 ರ ಖಾತೆಯು ಪ್ರಕಾಶ್ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಿನಾಂಕ 30.12.2002 ರಂದು ದಾವಾ ಅನುಸೂಚಿ ಸ್ವತ್ತನ್ನು ಮತ್ತು ಪ್ರಕಾಶ್ ರವರಿಗೆ ಸೇರಿದ 40 X 20 ಅಡಿ ಅಳತೆಯ ಒಟ್ಟು 80 X 20 ಅಡಿ ಅಳತೆಯ ಜಾಗವನ್ನು ನಮ್ಮ ತಾಯಿ ಮತ್ತು ಪ್ರಕಾಶ್ ರವರು ಪ್ರತಿವಾದಿಗೆ

ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ನನ್ನ ತಾಯಿ ಮತ್ತು ಪ್ರಕಾಶ್ ರವರು ರೂ.57,500/- ಪ್ರತಿಫಲವನ್ನು ಪಡೆದುಕೊಂಡು ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ನನ್ನ ತಂದೆ ತಾಯಿ ಮತ್ತು ನನ್ನ ಸಹೋದರರು ಎಲ್ಲರೂ ಸೇರಿ ಸಲ್ಲಿಸಿದ್ದೇವೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ದಿನಾಂಕ 30.12.2002 ರ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ದಿನಾಂಕ 30.12.2002 ರ ನಂತರ ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವಂತೆ 1 ಕಡೆ ಯುಜಿಡಿ ಮತ್ತು ಚರಂಡಿಯನ್ನು ಮಾಡಿದ್ದಾರೆ ಎಂದರೆ ಸರಿ. ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ರಸ್ತೆಯನ್ನು ಪ್ರತಿವಾದಿಯು ಅಸಲು ದಾವಾ ಸಂಖ್ಯೆ 159/2000 ನ್ನು ಸಲ್ಲಿಸಿ ಸದರಿ ದಾವೆಯಲ್ಲಿ ಎ ಬಿ ಸಿ ಡಿ ರಸ್ತೆ ಎಂದು ತೋರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 30.12.2002 ರ ನೊಂದಾಯಿತ ಕ್ರಯ ಪತ್ರ ಆದ ನಂತರ ಈ ದಾವೆಯ ಪ್ರತಿವಾದಿಯಾದ ಕುಮಾರ ಸ್ವಾಮಿಯವರು ಅಸಲು ದಾವಾ ಸಂಖ್ಯೆ 159/2000 ರಲ್ಲಿ ದಿನಾಂಕ 05.09.2003 ರಂದು ಮೆಮೋ ಸಲ್ಲಿಸಿ ಸದರಿ ದಾವೆಯ ವಸ್ತು ವಿಷಯವು ನ್ಯಾಯಾಲಯದ ಹೊರಗೆ ಇತ್ಯರ್ಥವಾಗಿದೆ ಎಂದು ದಾವೆಯನ್ನು ವಜಾ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2003 ರಿಂದ 2017 ರವರೆಗೆ ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು, 2017 ರಲ್ಲಿ ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವಂತೆ ರಸ್ತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ರಸ್ತೆಯನ್ನು ಪುರಸಭೆಯವರು ನಿರ್ಮಿಸಿದ್ದಾರೆ ಎಂದರೆ ಸರಿ. 2003 ರಿಂದ 2017 ರವರೆಗೆ ನಿಡಿ-5 ರ ಭಾವ ಚಿತ್ರದಲ್ಲಿ ಕಾಣುವ ರಸ್ತೆಯಲ್ಲಿ ಪ್ರತಿವಾದಿ ಮತ್ತು ಅಕ್ಕ ಪಕ್ಕದ ಮನೆಯವರು ಓಡಾಡುತ್ತಿದ್ದ ವಿಚಾರ ನನಗೆ ತಿಳಿದಿದ್ದರೂ ಸಹ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 30.12.2002 ರಂದು ಪ್ರತಿವಾದಿಯು 80 X 20 ಅಡಿ ಅಳತೆಯ ಜಾಗವನ್ನು ಖರೀದಿಸಿದ ನಂತರ ಸದರಿ ಜಾಗವನ್ನು ರಸ್ತೆಯಾಗಿ ಪರಿವರ್ತಿಸಲು ಪ್ರತಿವಾದಿಯು ಪುರಸಭೆಯವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-5 ರ ಭಾವ ಚಿತ್ರದ ಬಲಭಾಗದಲ್ಲಿ ಕಾಣುವ ಮನೆಯು ನನ್ನ ಸಹೋದರ 5 ನೇ ವಾದಿಯದ್ದಾಗಿರುತ್ತದೆ. ಸದರಿ ನಿಡಿ-5 ಭಾವ ಚಿತ್ರದಲ್ಲಿ ಕಾಣುವ ಬಲಭಾಗದ ಮನೆಯನ್ನು ನನ್ನ ಸಹೋದರ 5 ನೇ ವಾದಿಯು ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮೆಟ್ಟಿಲುಗಳನ್ನು

ನಿರ್ಮಿಸುತ್ತಿದ್ದಾರೆ ಎಂದು ಪ್ರತಿವಾದಿ ಮತ್ತು ಅಕ್ಕ ಪಕ್ಕದ ಮನೆಯವರು ಪುರಸಭೆಯವರಿಗೆ ದೂರು ನೀಡಿದ ಮೇರೆಗೆ ಪುರಸಭೆಯವರು ನಿಪಿ-5 ರಂತೆ ನನ್ನ ಸಹೋದರ 5 ನೇ ವಾದಿಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟೀಸ್ ಗೆ ನನ್ನ ತಾಯಿ 1 ನೇ ವಾದಿಯವರು ನಿಪಿ-6 ರಂತೆ ಉತ್ತರ ಸಲ್ಲಿಸಿದ್ದಾರೆ ಎಂದರೆ ಸರಿ. ಪುರಸಭೆಯವರು ನಿಪಿ-5 ರಂತೆ ನೋಟೀಸ್ ನೀಡಿದ ನಂತರ ನಾವುಗಳು ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಪ್ರಕಾಶ್ ರವರು ದಿನಾಂಕ 30.12.2002 ರ ಕ್ರಯ ಪತ್ರವನ್ನು ಇದುವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ದಿನಾಂಕ 30.12.2002 ರಂದು ಪ್ರತಿವಾದಿಯು ರಸ್ತೆಯ ಉದ್ದೇಶಕ್ಕಾಗಿ ದಾವಾ ಅನುಸೂಚಿ ಸ್ವತ್ತನ್ನು ನನ್ನ ತಾಯಿಯಿಂದ ಖರೀದಿಸಿದ್ದರೂ ಸಹ ಪ್ರತಿವಾದಿಗೆ ಮತ್ತು ಇತರ ಸಾರ್ವಜನಿಕರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕ 30.12.2002 ರ ಕ್ರಯ ಪತ್ರ ಆದ ನಂತರ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ವಾಸ್ತವ ಅಂಶ ನ್ಯಾಯಾಲಯಕ್ಕೆ ತಿಳಿದು ಬರುತ್ತದೆ ಎಂಬ ದುರುದ್ದೇಶದಿಂದ ನನ್ನ ತಾಯಿ 1 ನೇ ವಾದಿಯು ಈ ದಾವೆಯಲ್ಲಿ ಸಾಕ್ಷ್ಯ ನುಡಿದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಕಾಲ ಪರಿಮಿತಿ ವ್ಯಾಪ್ತಿ ಮೀರಿ ಸಲ್ಲಿಸಿರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ದಿನಾಂಕ 30.12.2002 ರ ಕ್ರಯ ಪತ್ರದ ಮೂಲಕ ದಾವಾ ಅನುಸೂಚಿ ಸ್ವತ್ತನ್ನು ಖರೀದಿಸಿ ಸಾರ್ವಜನಿಕರು ಓಡಾಡಲಿ ಎಂದು ರಸ್ತೆಯಾಗಿ ಬಿಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಸದರಿ ರಸ್ತೆಯಲ್ಲಿ ಪುರಸಭೆಯವರು ಚರಂಡಿ ಮತ್ತು ಯುಜಿಡಿ ಯನ್ನು ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು, ಸದರಿ ಜಾಗದಲ್ಲಿ ಪುರಸಭೆಯವರಿಗೆ ಯಾವುದೇ ಹಕ್ಕು ಇಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ರಸ್ತೆ ಇರುವ ವಿಚಾರ ಮತ್ತು ಸದರಿ ರಸ್ತೆಯಲ್ಲಿ ಸಾರ್ವಜನಿಕರು ತಿರುಗಾಡುತ್ತಿರುವ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು 2002 ರಲ್ಲಿಯೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ದಾವಾ ಅನುಸೂಚಿ ಸ್ವತ್ತಿನ ಮೇಲೆ ನನಗಾಗಲೀ ಅಥವಾ ಇತರ ವಾದಿಗಳಿಗಾಗಲಿ ಯಾವುದೇ ಹಕ್ಕು ಅಥವಾ ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ

ರಸ್ತೆಯನ್ನು ಹೊರತು ಪಡಿಸಿ ಪ್ರತಿವಾದಿಗೆ ಮತ್ತು ಅಕ್ಕ ಪಕ್ಕದ ಮನೆಯವರಿಗೆ ತಮ್ಮ ಮನೆಗಳಿಗೆ ಹೋಗಲು ಬೇರೆ ಯಾವುದೇ ಪರ್ಯಾಯ ರಸ್ತೆ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 30.12.2002 ರ ಕ್ರಯ ಪತ್ರವು ಕಾನೂನು ಬದ್ದವಾದ ಕ್ರಯ ಪತ್ರವಾಗಿರುವುದರಿಂದ ಸದರಿ ಕ್ರಯ ಪತ್ರವು ನನ್ನನ್ನು ಮತ್ತು ಇತರ ವಾದಿಗಳನ್ನು ಬದ್ಧ ಪಡಿಸುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಮತ್ತು ದಾವಾ ಅನುಸೂಚಿ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾಗಿ ಈ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಹಾಗಾಗಿ ಈ ಹಿಂದಿನ ದಾವಾ ಸಂಗತಿಗಳನ್ನು ಈ ದಾವೆಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ